ಶ್ರೀ ಎ. ಆರ್. ಬದರಿನಾರಾಯಣ.—ನಾನು ಹಾಗೆ ಹೇಳಿಲ್ಲಿಲ್ಲ. ಸಾಧ್ಯವಾದರೆ ಇವರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿ ರಿಜರ್ವೇಷನ್ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂಬ ಆಸೆ ನನಗಿದೆ.

Mr. SPEAKER.—Shri Naidu has been authorised to put question on behalf of Sri Chandrasekhar.

LOCAL CANDIDATES SERVING IN THE DEPARTMENT OF COLLEGIATE EDUCATION.

37. Sri NAIDU [On behalf of Sri S. M. SHEERANALY CHANDASEKHAR (Hosanagar).]—

Will the Minister for Education be pleased to state :—

(*a*) the number of local candidates serving in the Department of Collegiate Education ;

(*b*) whether the services of these candidates have been regularised ;

(*c*) if not, whether the Government intends to regularise the services of such local candidates who are serving from a long time ?

Sri A. R. BADARINARAYANA (Minister for Education).—

(*a*) Ministerial .. 61
Teaching staff .. 162
(Lecturers/Demonstrators)

(*b*) No.

(*c*) As these candidates do not satisfy the stipulations laid down in Government Order No. GAD 15 SRL 70, dated 10th December 1970, the question of regularisation of their services does not arise.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಸ್ಪಾಬಿ ತಮ್ಮ ಉತ್ತರದಲ್ಲಿ ಜಿ. ಎ. ಡಿ. 15 ; ಎಸ್. ಆರ್. ಎ೮. 70 ನೇ ಕ್ರಮಾಂಕದ 1970ನೇ ಇಸವಿ ಡಿಸೆಂಬರ್ ಮಾಹೆ 10ನೇ ದಿನಾಂಕದ ಸರ್ಕಾರಿ ಆದೇಶದ ಪ್ರಕಾರ ಇವ ು ಆ ಷರತ್ತುಗಳನ್ನು ಪೂರೈಸದಿರುವುದರಿಂದ ಇವರನ್ನೇಯನ್ನು ಕ್ರಮಗೊಳಿಸುವುದಕ್ಕೆ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸರಾಗಿದೆ. ಹಾಗಾದರೆ ಈ ಹಿಂದಕ್ಕೆ ನೇಮಕ ಮಾಡಿಲ್ಲಿಸಿದವರ ಸಂಖ್ಯೆ ಎಷ್ಟಿದೆ ? ಅವರ ಬಗ್ಗೆ ಸರ್ಕಾರದವರು ಯಾವ ನೀತಿಯನ್ನು ಅನುಸರಿಸುವರು !

† ಶ್ರೀ ಎ. ಆರ್. ಬದರಿನಾರಾಯಣ್.—ಈ ಲೋಕಲ್ ಕ್ಯಾಂಡಿಡೇಟುಗಳು ಪ್ರತಿ ವರ್ಷವೂ ಬರುತ್ತಲೇ ಇರುತ್ತಾರೆ. ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡತಕ್ಕ ಕಾಲದಲ್ಲಿ ಪಿ. ಎಸ್. ಸಿ. ಅವರ ನೇಮಗಳಿಗೆ ವಿರುದ್ಧವಾಗಿ ಯಾರನ್ನೂ ನೇಮಕ ಮಾಡಬಾರದೆಂದಿದೆ. ಆದರೆ ತಾತ್ಕಾಲಿಕವಾಗಿ ಯಾರನ್ನು ತಗೆದುಕೊಳ್ಳಲಾಗಿದೆಯೋ ಅವರಿಗೆ ತಮ್ಮನ್ನು ತಾತ್ಕಾಲಿಕವಾಗಿ ತೆಗೆದುಕೊಳ್ಳಲಾಗಿದೆ ಎನ್ನುವುದು ಗೊತ್ತಿದೆ. ಅದನ್ನು ತಿಳಿದೇ ಅವರು ಕೆಲಸಕ್ಕೆ ಸೇರಿರುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಮೊದಲೇ ಒಂದು ನೀತಿ ನಿಯಮಗಳನ್ನು ಹಾಕುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—1970ನೇ ಇಸವಿಯವರೆಗೆ ಯಾರಿಗಾದರೂ ಒಂದು ವರ್ಷಕ್ಕೆ ಮೇಲ್ಪಟ್ಟು ಸರ್ವಿಸ್ ಆಗಿದ್ದರೆ, ಅಂಥ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಕನ್‌ಫರ್ಮ್ ಮಾಡಿದೆ. ಅದು ಬಿಟ್ಟು ಬಂದವರಿಗೆಲ್ಲಾ ಕನ್‌ಫರ್ಮ್ ಮಾಡಿದರೆ, ಬೇರೆ ಕಡೆಯಿಂದ ಅದಕ್ಕೆ ಒಬ್ಜೆಕ್ಷನ್ಸ್ ಬರುತ್ತವೆ. There will be objection on the other side saying that the Public Service Commission Rules are flouted and the recruitment rules are flouted. ಆದ್ದರಿಂದ ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಈ ರೀತಿ ಮಾಡುವುದರಿಂದ ಅವರಿಗೆ ಏಜ್ ಬಾರ್ ಆಗಿ ಪ್ರೊಮೋಶನ್ಸಿಗೆ ತೊಂದರೆಯಾಗುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಅದನ್ನೆಲ್ಲಾ ಯೋಚನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್. ಈ ಲೋಕಲ್ ಕ್ಯಾಂಡಿಡೇಟ್ಸ್ ಪ್ರಶ್ನೆ ಹಿಂದೆಯೂ ಬಂದಿತ್ತು. ಸುಮಾರು ಒಂದು ವರ್ಷಕ್ಕಿಂತ ಮೇಲ್ಪಟ್ಟು ಸರ್ವಿಸ್ ಮಾಡಿದರೆ, ಅಂಥವರನ್ನು ಪರ್ಮನೆಂಟ್ ಮಾಡುವುದಕ್ಕೆ ನಿಮಗೆ ಹಕ್ಕು ಇಲ್ಲವೇ ; ಮತ್ತು ಹಕ್ಕು ಇಲ್ಲದಿದ್ದರೆ ಆ ಹಕ್ಕನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ನಾನು ಮೊದಲೇ ಹೇಳಿದ ಹಾಗೆ 1-10-70ರ ಹಿಂದೆ ಯಾರು ಕೆಲಸದಲ್ಲಿ ಇದ್ದರು ಅಂಥವರನ್ನು ಕನ್‌ಫರ್ಮ್ ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕೆ ಒಳಪಟ್ಟು ಯಾರಾದರೂ ಬಂದರೆ ಅವರನ್ನು ಕನ್‌ಫರ್ಮ್ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ತಮ್ಮ 1970ರ ಆರ್ಡರ್ ಪ್ರಕಾರ ಕ್ಲಾಸಿಫಿಕೇಶನ್ ಆಫ್ ವೇಕನ್ಸಿ ಮಾಡಿ ಯಾವ್ಯಾವ ವರ್ಗಕ್ಕೆ ಎಷ್ಟೆಷ್ಟು ಕೊಡಬೇಕೆನ್ನುವ ತಕ್ಕಂತಹ ತತ್ವ ಇದೆ. ಆ ತತ್ವವನ್ನು ಅನುಸರಿಸದೆ ಯಾವುದಾದರೂ ಯುನಿಟ್ ಆಫೀಸರ್ಸು ಲೋಕಲ್ ಕ್ಯಾಂಡಿಡೇಟ್ಸನ್ನು ನೇಮಕ ಮಾಡಿದ್ದರೆ ಮತ್ತು ಮಾಡುತ್ತಾ ಇದ್ದರೆ, ಇದು ಕ್ರಮಬದ್ಧವಲ್ಲವೆಂದು ಸಾರುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಹಾಗೆ ಯಾರಾದರೂ ಮಾಡಿದರೆ, ಅದರ ಬಗ್ಗೆ ತಕ್ಕ ಬಂದೋಬಸ್ತು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದುಕೊಂಡ ಮೇಲೆ ಎಲ್ಲರನ್ನೂ ಕ್ರಮಬದ್ಧ ಗೊಳಿಸಬೇಕೆನ್ನುವ ಅಭಿಪ್ರಾಯವನ್ನು ಒಪ್ಪಿದರೂ ಕೂಡ ಇತ್ತೀಚೆಗೆ ತೆಗೆದುಕೊಂಡ ಅಭ್ಯರ್ಥಿಗಳನ್ನು ಖಾಯಂಗೊಳಿಸುವುದಕ್ಕೆ ಕಷ್ಟವಾಗುತ್ತದೆ. ಇತ್ತೀಚೆಗೆ ಕೆಲವು ಹುದ್ದೆಗಳಿಗೆ ಇಂಟರ್‌ವ್ಯೂ ಮಾಡತಕ್ಕ ಕಾಲದಲ್ಲಿ 1-2-3-4-ವರ್ಷ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡಿರತಕ್ಕ ಅಭ್ಯರ್ಥಿಗಳಿಗೆ ಪ್ರಿಫರೆನ್ಸ್ ಕೊಡುವುದನ್ನು ಪರಿಪಾಲನೆಮಾಡಿಲ್ಲ. ಆದ್ದರಿಂದ ಸರ್ಕಾರದವರು ಎಲ್ಲೆಲ್ಲ ಇಂಟರ್ ವ್ಯೂ ಮಾಡುತ್ತಾರೆ, ಅಲ್ಲಿ ಯಾರು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡಿರುತ್ತಾರೆ, ಅಂಥವರಿಗೆ ಪ್ರಾಶಸ್ತ್ಯವನ್ನು ಕೊಡುವಂತೆ ಎಲ್ಲಾ ಇಲಾಖೆಗಳಿಗೂ ಸೂಚನೆಯನ್ನು ಕಳಿಸುತ್ತೀರಾ ?

Sri A. R. BADARINARAYANA.—It is a question of policy. It is not as though it is only for the Education Department. The other Departments also will claim the same right. Since it is a question of State policy I cannot assure the Hon'ble Member anything now.

IRRIGATION SCHEMES IN SHIKARIPUR TALUK

45. Sri K. YENKATAPPA (Shikaripur).—

Will the Minister for Public Works and Electricity be pleased to state :—

(*a*) whether any irrigation schemes in Hosur, Talagunda and Udugani hoblies of Shikaripur Taluk are under consideration ;